ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮಹಿಳಾ [illegible] (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 27/2/2020

ಹಲವು ಶಿಫಾರಸುಗಳೊಂದಿಗೆ ಬಾಡಿಗೆ ತಾಯ್ತನ ವಿಧೇಯಕಕ್ಕೆ ಸಂಪುಟ ಅಸ್ತು

# ಬಾಡಿಗೆ ತಾಯಿ ನಿರ್ಬಂಧ ಮುಕ್ತ

**ಹೊಸದಿಲ್ಲಿ:** ರಾಜ್ಯಸಭೆಯ ಪ್ರಮುಖ ಶಿಫಾರಸುಗಳ ಸೇರ್ಪಡೆಯೊಂದಿಗೆ ಸಿದ್ಧಗೊಂಡಿರುವ ಬಾಡಿಗೆ ತಾಯ್ತನ ನಿಯಂತ್ರಣ ವಿಧೇಯಕ-2020ಕ್ಕೆ ಕೇಂದ್ರ ಸಚಿವ ಸಂಪುಟದ ಅಸ್ತು ಮುದ್ರೆ ಬಿದ್ದಿದೆ. ಬಾಡಿಗೆ ತಾಯಿಯಾಗಲು ಕುಟುಂಬವೊಂದರ ಹತ್ತಿರದ ಸಂಬಂಧಿಯೇ ಆಗಿರಬೇಕಾಗಿಲ್ಲ, ಬಾಡಿಗೆ ತಾಯ್ತನದ ಪಾತ್ರ ವಹಿಸಲು ಇಚ್ಛಿಸುವ ಮಹಿಳೆಗೂ ಅವಕಾಶ ಸಿಗಬೇಕು ಎಂದು ರಾಜ್ಯಸಭೆಯ 23 ಸದಸ್ಯರ ಸಮಿತಿಯು ಸರಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸುಗಳೊಂದಿಗೆ ಪರಿಷ್ಕೃತಗೊಂಡಿರುವ ಬಾಡಿಗೆ ತಾಯ್ತನ ನಿಯಂತ್ರಣ ವಿಧೇಯಕಕ್ಕೆ ಈಗ ಕ್ಯಾಬಿನೆಟ್ ಒಪ್ಪಿಗೆ ಸೂಚಿಸಿದೆ. ವಾಣಿಜ್ಯ ಉದ್ದೇಶಕ್ಕೆ ಬಾಡಿಗೆ ತಾಯ್ತನ ದುರ್ಬಳಕೆಯಾಗುವುದಕ್ಕೂ ಇದು ಕಡಿವಾಣ ಹಾಕಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದರು.

ಕಳೆದ ವರ್ಷ ಲೋಕಸಭೆಯ ಅನುಮೋದನೆ ಪಡೆದಿದ್ದ ಬಾಡಿಗೆ ತಾಯ್ತನ ನಿಯಂತ್ರಣ-2019 ವಿಧೇಯಕದಲ್ಲಿ ಬಾಡಿಗೆ ತಾಯಿ ಕುಟುಂಬವೊಂದರ ನಿಕಟ ಸಂಬಂಧಿಯೇ ಆಗಿರಬೇಕೆಂದು ನಿರ್ಬಂಧಿಸಲಾಗಿತ್ತು. ಇದು ಬಾಡಿಗೆತಾಯಂದಿರ ಲಭ್ಯತೆಯನ್ನು ಮಿತಿಗೊಳಿಸುತ್ತದೆ. ನಿಜವಾಗಿಯೂ ಮಗುವಿನ ಅವಶ್ಯಕತೆಯಲ್ಲಿರುವ ಅಪೇಕ್ಷಿತರ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಈ ನಿಬಂಧನೆ ತೆಗೆದುಹಾಕಬೇಕೆಂದು ರಾಜ್ಯಸಭೆಯ ಸದಸ್ಯರ ಸಮಿತಿ ಶಿಫಾರಸು ಮಾಡಿತ್ತು. ಈಗ ಪರಿಷ್ಕರಣೆಗೊಂದಿಗೆ ಸಚಿವ ಸಂಪುಟ ಅಂಗೀಕರಿಸಿದ ವಿಧೇಯಕವನ್ನು ಪುನಃ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿ ಒಪ್ಪಿಗೆ ಪಡೆಯಬೇಕಾಗುತ್ತದೆ.

**ಹಲವು ಶಿಫಾರಸು:** 35 ರಿಂದ 45 ವರ್ಷದೊಳಗಿನ ವಿಧವೆ ಅಥವಾ ವಿಚ್ಛೇದಿತ ಮಹಿಳೆಗೂ ಬಾಡಿಗೆ ತಾಯ್ತನ ಪಡೆಯಲು ಅವಕಾಶ ನೀಡಬೇಕೆಂಬ ಸಲಹೆಯನ್ನೂ ಸೇರಿಸಲಾಗಿದೆ. ಬಂಜೆತನ ಪದವನ್ನು ತೆಗೆದು ಹಾಕಿ ಅದರ ಬದಲಿಗೆ ಅಸಮರ್ಥತೆ ಎಂಬ ಪದ ಸೇರಿಸಲು ಹಾಗೂ ಬಾಡಿಗೆ ತಾಯಿಗೆ ಉದ್ದೇಶಿತ ವಿಮಾ ರಕ್ಷಣೆಯನ್ನು 16 ತಿಂಗಳಿಂದ 36 ತಿಂಗಳಿಗೆ ವಿಸ್ತರಿಸಬೇಕೆಂಬ ಹಾಗೂ ದೇಶದಲ್ಲಿ ಭಾರತೀಯ ಮೂಲದ ಜೋಡಿಗಷ್ಟೇ ಈ ಬಾಡಿಗೆ ತಾಯ್ತನದ ಭಾಗ್ಯ ಪಡೆಯಲು ಅವಕಾಶ ನೀಡಬೇಕೆಂಬ ಶಿಫಾರಸುಗಳನ್ನೂ ಪರಿಷ್ಕೃತ ವಿಧೇಯಕ ಕರಡಿನಲ್ಲಿ ಸೇರಿಸಲಾಗಿದೆ.



## ಜವಳಿ ಮಿಷನ್ ಸ್ಥಾಪನೆಗೆ ಒಪ್ಪಿಗೆ

ಜಾಗತಿಕ ಮಾರುಕಟ್ಟೆಗೆ ತಕ್ಕಂತೆ ಜವಳಿ ಉದ್ಯಮದಲ್ಲಿ ವೃತ್ತಿಪರತೆ ಸಾಧಿಸುವ ಉದ್ದೇಶದಿಂದ ಸರಕಾರ 1,480 ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್ (ಎನ್‌ಟಿಟಿಎಂ) ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆಯಡಿ 50 ಸಾವಿರ ನೇಕಾರರಿಗೆ ಜವಳಿ ಉದ್ಯಮದಲ್ಲಿನ ತಾಂತ್ರಿಕ ಕೌಶಲ್ಯ ರೂಢಿಸಿಕೊಳ್ಳಲು ತರಬೇತಿ ನೀಡುವ ಗುರಿ ಹಮ್ಮಿಕೊಂಡಿದೆ. ಜವಳಿ ಕ್ಷೇತ್ರದಲ್ಲಿ ಪರಿಣತಿ ಹಾಗೂ ರಫ್ತು ಹೆಚ್ಚಿಸಲು ಇದು ಅನುವಾಗಲಿದೆ.

**ಕೇಂದ್ರೀಯ ಕಾನೂನುಗಳ ಅನುಷ್ಠಾನ:** ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರದಲ್ಲಿ 37 ಕೇಂದ್ರೀಯ ಕಾನೂನುಗಳನ್ನು ಅನುಷ್ಠಾನಗೊಳಿಸುವ ಪ್ರಸ್ತಾವಕ್ಕೂ ಸಂಪುಟ ಅನುಮೋದನೆ ನೀಡಿದೆ. 370ನೇ ವಿಧಿ ರದ್ದತಿ ಬಳಿಕ 2019ರ ಅಕ್ಟೋಬರ್ 31ರಿಂದ ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶವಾಗಿ ಜಾರಿಗೆ ಬಂದಿದೆ.